multiplex® YUKTIX

# ಯುಕ್ಟಿಕ್ಸ್ IoT ಸಾಧನ

## ರೈತನ ಅಭಿಪ್ರಾಯ



ಪರಸ್ಪರ ಡೇಟಾವನ್ನು ಹಂಚಿಕೊಳ್ಳುವ ಸಾಮರ್ಥ್ಯವಿರುವ, ಇಂಟರ್ನೆಟ್‌ಗೆ ಸಂಪರ್ಕ ಹೊಂದಿರುವ ಸಾಧನಗಳ ಜಾಲವನ್ನು ನಾವು IoT ಅಥವಾ Internet of Things ಎನ್ನುತ್ತೇವೆ. ಕೃಷಿಯ ಭಾಷೆಯಲ್ಲಿ ಹೇಳುವುದಾದರೆ, ರೈತನ ಜಮೀನಿನ ಮಣ್ಣಿನಲ್ಲಿ ತೇವಾಂಶ ಎಷ್ಟಿದೆ, ಆ ಜಾಗದಲ್ಲಿ ಮಳೆಯಾಗಿದೆಯಾ? ನಾಳೆ ಮಳೆಯಾಗಲಿದೆಯಾ? ರೈತನ ಜಮೀನಿನಲ್ಲಿ ಆರ್ದ್ರತೆ ಎಷ್ಟಿದೆ? ತಾಪಮಾನ ಎಷ್ಟು? ಗಾಳಿಯ ವೇಗ ಏನಿದೆ? ಇತ್ಯಾದಿಗಳನ್ನು ಅಳೆಯುವ ಸೆನ್ಸರ್‌ಗಳನ್ನು ಅಳವಡಿಸಿ, ಅವನ್ನು ಇಂಟರ್ನೆಟ್‌ಗೆ ಸಂಪರ್ಕಿಸಿದರೆ ಅದನ್ನು IoT ಸಾಧನ ಎನ್ನಬಹುದು. ಇದರಿಂದ ರೈತರು ತಮ್ಮ ಜಮೀನಿನ ಬೆಳೆಯ ಆರೋಗ್ಯದ ಬಗ್ಗೆ ತಿಳಿದುಕೊಳ್ಳಬಹುದು, ಸದ್ಯದ ಪರಿಸ್ಥಿತಿಯನ್ನು ತಿಳಿದು ಮುಂದೆ ಬರಬಹುದಾದ ರೋಗ-ಕೀಟದ ಹಾವಳಿಯ ಬಗ್ಗೆ ಅರಿತು, ಮುಂಜಾಗ್ರತಾ ಕ್ರಮವಾಗಿ ಸಿಂಪಡಣೆಗಳನ್ನು ಕೈಗೊಳ್ಳಬಹುದು. ಸೆನ್ಸಾರ್ ಆಧರಿಸಿ ನೀರು ಬಿಡುವುದು, ಬಂದ್ ಮಾಡುವುದು, ಗೊಬ್ಬರ ಕೊಡುವುದು, ರಸಾವರಿ ಇತ್ಯಾದಿ ಬೇಸಾಯ ಕ್ರಮಗಳನ್ನು ಕೈಗೊಳ್ಳಬಹುದು. ಇವೆಲ್ಲ IoT ಸಾಧನ ಅಳವಡಿಸುವುದರಿಂದ ಆಗುವ ಲಾಭಗಳು.

ನಿಖರ ಕೃಷಿಯೆಡೆಗೆ ನಮ್ಮ ರೈತರು ಇಡುತ್ತಿರುವ ಮೊದಲ ಹೆಜ್ಜೆ ಈ IoT ಸಾಧನ. ರೈತರಿಗೆ ಸಹಾಯವಾಗಬಲ್ಲ ಆಧೂನಿಕತೆಯನ್ನು ಪರಿಚಯಿಸಲು ಪಣತೊಟ್ಟಿರುವ ಮಲ್ಟಿಪ್ಲೆಕ್ಸ್ ಸಮೂಹ ಸಂಸ್ಥೆ ಯುಕ್ಟಿಕ್ಸ್ ಎಂಬ IoT ಸಾಧನವನ್ನು ತಯಾರಿಸಿದೆ. ಇದನ್ನು ಈಗಾಗಲೇ ಹಲವಾರು ರೈತರು ಬಳಸುತ್ತಿದ್ದಾರೆ. ಹರಿಯಾಣದ ಸಿರ್ಸಾ ಜಿಲ್ಲೆಯ ಸಾವಂತ್‌ಖೇಡಿ ಊರಿನ ಚೆತ್ರಾಮ್ ಗೋದಾರಾ ಅವರು ಈ ಹಲವರಲ್ಲಿ ಒಬ್ಬರು. 2025 ರ ಅಂತ್ಯದಲ್ಲಿ ಇವರು ತಮ್ಮ 10 ಎಕರೆ ಕಿನ್ನೋ (ಕಿತ್ತಳೆ ತಳಿ) ಹಣ್ಣಿನ ತೋಟದಲ್ಲಿ ಯುಕ್ಟಿಕ್ಸ್ IoT ಸಾಧನವನ್ನು ಅಳವಡಿಸಿದ್ದಾರೆ. ಸದ್ಯಕ್ಕೆ ಅವರ ತೋಟದಲ್ಲಿ ಕಿನ್ನೋ ಮರಗಳು ಹೂ ಬಿಡುತ್ತಿವೆ. ಈ ಸಂದರ್ಭದಲ್ಲಿ ಅವರೊಂದಿಗೆ ದೂರವಾಣಿಯ ಮೂಲಕ ಹಿಂದಿಯಲ್ಲಿ ನಡೆಸಿದ ಸಂಭಾಷಣೆಯ ತುಣುಕನ್ನು ಕನ್ನಡದಲ್ಲಿ ಇಲ್ಲಿ ನೀಡಲಾಗಿದೆ.

**ತಾವು ಯುಕ್ಟಿಕ್ಸ್ IoT ಸಾಧನದ ಬಗ್ಗೆ ಎಲ್ಲಿ ಮತ್ತು ಹೇಗೆ ತಿಳಿದುಕೊಂಡಿರಿ?**

ಮಲ್ಟಿಪ್ಲೆಕ್ಸ್ ಸಂಸ್ಥೆ 50 ವರ್ಷಗಳನ್ನು ಪೂರೈಸಿದ ಹಿನ್ನಲೆಯಲ್ಲಿ, 2024 ರಲ್ಲಿ ಬೆಂಗಳೂರಿನಲ್ಲಿ ಕಾರ್ಯಕ್ರಮವೊಂದನ್ನು ಆಯೋಜಿಸಲಾಗಿತ್ತು. ಆ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದ ನನಗೆ ಮೊಟ್ಟ ಮೊದಲ ಬಾರಿಗೆ ಯುಕ್ಟಿಕ್ಸ್ ಬಗ್ಗೆ ತಿಳಿಯಿತು. ಅದಾದ ನಂತರ ಇಲ್ಲಿ ಹರಿಯಾಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಲ್ಟಿಪ್ಲೆಕ್ಸ್ ಸಿಬ್ಬಂದಿಯವರನ್ನು ಕೇಳಿ, ಇನ್ನಷ್ಟು ಮಾಹಿತಿಯನ್ನು ಪಡೆದುಕೊಂಡು ಯುಕ್ಟಿಕ್ಸ್ ಸಾಧನವನ್ನು ನನ್ನ ಜಮೀನಿನಲ್ಲಿ ಅಳವಡಿಸಲು ನಿರ್ಧರಿಸಿದೆ.

**ತಾವು ಈಗಾಗಲೇ ತಿಳಿಸಿರುವಂತೆ ನಿಮಗೆ ಸುಮಾರು 30 ಎಕರೆಗಿಂತ ಹೆಚ್ಚಿಗೆ ಭೂಮಿಯಿದೆ. ಅಲ್ಲಿ ಬೇರೆ ಬೇರೆ ಬೆಳೆಗಳಿವೆ. ಆದರೂ ಕಿನ್ನೋ ಹಣ್ಣಿನ ತೋಟದಲ್ಲೇ ಏಕೆ ಯುಕ್ಟಿಕ್ಸ್ ಅನ್ನು ಅಳವಡಿಸಿದಿರಿ?**

ನಾನು ನನ್ನ ಜಮೀನಿನಲ್ಲಿ ಹತ್ತಿ, ಗೋಧಿ, ಸಾಸಿವೆ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತೇನೆ. ಆದರೆ ಹೆಚ್ಚು ಆದಾಯ ತರುವ ಮತ್ತು ಹೆಚ್ಚು ಕಾಳಜಿ ಮಾಡಿ ಬೆಳೆ ತೆಗೆಯಬೇಕಾದ ಅವಶ್ಯಕತೆ ಕಿನ್ನೋ ಹಣ್ಣಿನಲ್ಲಿತ್ತು. ಅದಕ್ಕಾಗಿ ಅಲ್ಲಿಯೇ ನಾನು ಯುಕ್ಟಿಕ್ಸ್ ಅನ್ನು ಹಾಕಿಸಿದ್ದು.

**ಅಳವಡಿಸುವುದಕ್ಕಿಂತ ಮೊದಲು ಯುಕ್ಟಿಕ್ಸ್ ಬಗ್ಗೆ ಏನೆಲ್ಲ ತಿಳಿದಿತ್ತು?**

ಯುಕ್ಟಿಕ್ಸ್ ಎಂಬುದೊಂದು IoT ಸಾಧನ. ಇದು ನಮಗೆ ನಮ್ಮ ಜಮೀನಿನ ಮತ್ತು ಮಣ್ಣಿನ ಬಗ್ಗೆ ಕ್ಷಣ ಕ್ಷಣದ ಮಾಹಿತಿಯನ್ನು ಕೊಡುತ್ತದೆ ಎಂದು ನಾನು ತಿಳಿದುಕೊಂಡಿದ್ದೆ. ಇವೆಲ್ಲ ಡಾಟಾ ನನಗೆ ಸಿಕ್ಕರೆ, ಬೆಳೆ ರಕ್ಷಣೆ ಸುಲಭವಾಗುತ್ತದೆ ಎಂದು ನಾನು ಯುಕ್ಟಿಕ್ಸ್ ಅನ್ನು ಖರೀದಿ ಮಾಡಿದ್ದೇನೆ.



**ಮಾರಾಟ ಮಾಡುವುದಕ್ಕಿಂತ ಮೊದಲು ನಿಮಗೆ ಹೇಳಿದ್ದ ಹಾಗೆ ಯುಕ್ಟಿಕ್ಸ್ ಕಾರ್ಯನಿರ್ವಹಿಸುತ್ತಿದೆಯಾ?**

ಹೌದು ನಾನು ಅಂದುಕೊಂಡ ಹಾಗೆ ಯುಕ್ಟಿಕ್ಸ್ ಸಾಧನ ಕಾರ್ಯನಿರ್ವಹಿಸುತ್ತಿದೆ.

**ಸ್ವಲ್ಪ ವಿವರಿಸಿ ತಿಳಿಸಬಹುದಾ?**

ಮಲ್ಟಿಪ್ಲೆಕ್ಸ್‌ನ ಸಿಬ್ಬಂದಿ ತಿಳಿಸಿದ ಹಾಗೆಯೆ ನನಗೆ ಜಮೀನಿನ ತಾಪಮಾನ, ಆರ್ದತೆ, ಮಣ್ಣಿನ ತೇವಾಂಶ, ಮಳೆಯಾಗಿರುವ ಪ್ರಮಾಣ, ಮಳೆಯಾಗಬಹುದಾ ಎಂಬ ಮುನ್ಸೂಚನೆ, ಗಾಳಿಯ ವೇಗ ಇವೆಲ್ಲದರ ಅಂಕಿ ಅಂಶ ಯುಕ್ಟಿಕ್ಸ್‌ನವರ ಆಪ್‌ನಲ್ಲಿ ಸಿಗುತ್ತಿದೆ. ಈ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ಮಲ್ಟಿಪ್ಲೆಕ್ಸ್ ನ ತಾಂತ್ರಿಕ ಸಲಹೆಗಾರರು ನಾವು ಕೈಗೊಳ್ಳಬೇಕಾಗಿರುವ ಬೇಸಾಯ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡುತ್ತಾರೆ.

**ಮಲ್ಟಿಪ್ಲೆಕ್ಸ್ ನ ತಾಂತ್ರಿಕ ಸಲಹೆಗಾರರು ನಿಮಗೆ ಏನೆಲ್ಲ ಮಾಹಿತಿಯನ್ನು ನೀಡುತ್ತಿದ್ದಾರೆ? ಎಷ್ಟು ದಿನಕ್ಕೊಮ್ಮೆ ನಿಮಗೆ ಈ ಮಾಹಿತಿಯನ್ನು ನೀಡಲಾಗುತ್ತಿದೆ?**

ನನಗೆ ಪ್ರತಿ ವಾರವೂ ಕೂಡ ಬೆಳೆಯ ಬೆಗ್ಗೆ ಎಲ್ಲ ಮಾಹಿತಿಯನ್ನು ಕೊಡುತ್ತಿದ್ದಾರೆ. ಜೊತೆಗೆ ಬೆಳೆಯ ಹಂತವನ್ನು ನೋಡಿಕೊಂಡು, ನನ್ನ ಜಮೀನಿನ ತಾಪಮಾನ, ಆರ್ದತೆ, ಮಣ್ಣಿನ ತಾಪಮಾನ, ತೇವಾಂಶ, ಮಳೆ ಬರುವ ಸಂಭವ, ಬಂದ ಮಳೆಯ ತೀವ್ರತೆಯನ್ನು ಆಧಾರವಾಗಿಟ್ಟುಕೊಂಡು, ಈ ರೋಗಗಳು ಮತ್ತು ಕೀಟಗಳು ಜಮೀನಿಗೆ ಧಾಳಿ ಮಾಡುವ ಸಾಧ್ಯತೆ ಇದೆ, ಇದು ಬರದಂತೆ ಮಾಡಲು ಈ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು, ಬಂದರೆ ಈ ಎಲ್ಲ ಸಿಂಪಡಣೆಗಳನ್ನು ತೆಗೆದುಕೊಳ್ಳಿ ಎಂದು ನನಗೆ ತಿಳಿಸುತ್ತಿದ್ದಾರೆ. ಆ ರೋಗ ಅಥವಾ ಕೀಟದ ಫೋಟೊಗಳನ್ನು ಕಳುಹಿಸುತ್ತಾರೆ. ಇದರಿಂದ ನನಗೆ ಹೆಚ್ಚಿನ ಲಾಭವಾಗಿದೆ.

**ಯುಕ್ಟಿಕ್ಸ್ ಸಾಧನವನ್ನು ಅಳವಡಿಸಿದ್ದರಿಂದ ನಿಮಗೆ ಏನಾದರೂ ಉಪಯೋಗವಾಗಿದೆಯಾ?**

ಖಂಡಿತವಾಗಿ ನನಗೆ ಹಲವಾರು ಉಪಯೋಗಗಳಾಗಿವೆ. ಹಿಂದೆಲ್ಲ ನಾನು ರೋಗ – ಕೀಟ ಬಂದ ನಂತರ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುತ್ತಿದ್ದೆ. ಇದರಿಂದ ಹಲವಾರು ಬಾರಿ ಚೆನ್ನಾಗಿ ಬಂದಿದ್ದ ಬೆಳೆಯನ್ನು ಕಳೆದುಕೊಂಡಿದ್ದೇನೆ. ಹಲವಾರು ಕಿನ್ನೋ ಮರಗಳು ರೋಗ-ಕೀಟ ಬಾಧೆಯಿಂದ ಸಾವನ್ನಪ್ಪಿ ಅಪಾರ ನಷ್ಟವನ್ನು ಅನುಭವಿಸಿದ್ದೇನೆ. ಆದರೆ ಯುಕ್ಟಿಕ್ಸ್ ದೆಸೆಯಿಂದ ಕೀಟ-ರೋಗದ ಹಾವಳಿಯ ಅಂದಾಜು ಮೊದಲೇ ಆಗುತ್ತಿದೆ. ಇದರಿಂದ ನಿಯಂತ್ರಣ ಸುಲಭವಾಗಿದೆ. ಕೆಲ ರೋಗಗಳು ನನ್ನ ಗಿಡಗಳಿಗೆ ಬರದಂತೆ ತಡೆಯಲು ಸಾಧ್ಯವಾಗಿದೆ. ಇನ್ನು ಹಲವಾರು ಕೀಟ-ರೋಗಗಳು ಬಂದ ತಕ್ಷಣ ನಿಯಂತ್ರಣಕ್ರಮಗಳನ್ನು ಕೈಗೊಂಡು, ಬೆಳೆ ನಷ್ಟವನ್ನು ಕಡಿಮೆ ಮಾಡಿಕೊಂಡಿದ್ದೇನೆ. ಇದರಿಂದ ಈ ಬಾರಿ ಹಿಂದೆಂದಿಗಿಂತ ಹೆಚ್ಚಿಗೆ ಲಾಭವನ್ನು ಪಡೆದುಕೊಳ್ಳುವ ನಿರೀಕ್ಷೆಯಿದೆ. ಜೊತೆಗೆ ಯುಕ್ಟಿಕ್ಸ್ ಸಾಧನವನ್ನು ಅಳವಡಿಸುವುದಕ್ಕಿಂತ ಮೊದಲು ಸಿಂಪಡಣೆಗಾಗಿ ಹೆಚ್ಚಿನ ಖರ್ಚು ಮಾಡುತ್ತಿದೆ. ಇದೀಗ ರೋಗ-ಕೀಟ ಬರುವುದಕ್ಕಿಂತ ಮೊದಲು ಅಥವಾ ಅವುಗಳು ನಮ್ಮ ಜಮೀನಿನಲ್ಲಿ ಉಲ್ಬಣಿಸುವ ಮೊದಲೇ ಸಿಂಪಡಣೆಯನ್ನು ಕೈಗೊಳ್ಳುತ್ತಿರುವುದರಿಂದ ಕಡಿಮೆ ರಾಸಾಯನಿಕವನ್ನು ಬಳಸತೊಡಗಿದ್ದೇನೆ. ಇದರಿಂದ ಪೆಸ್ಟಿಸೈಡ್, ಇನ್ಸೆಕ್ಟಿಸೈಡ್‌ಗಾಗಿ ಮಾಡುತ್ತಿದ್ದ ಖರ್ಚು ಕಡಿಮೆ ಆಗಿದೆ. ಲಾಭ ಹೆಚ್ಚಲಿದೆ ಎನ್ನುವ ಭರವಸೆ ನನ್ನದು.




**ಯುಕ್ಟಿಕ್ಸ್ ಸಾಧನ ನಿಮಗೆ ತೃಪ್ತಿ ತಂದಿದೆಯಾ?**

ಖಂಡಿತವಾಗಿಯೂ ಯುಕ್ಟಿಕ್ಸ್ ಸಾಧನ ನನಗೆ ತೃಪ್ತಿ ತಂದಿದೆ. ಇದನ್ನು ಅಳವಡಿಸಿರುವುದರಿಂದ ಈ ಬಾರಿ ಹೆಚ್ಚಿಗೆ ಲಾಭ ಬರಲಿದೆ ಎನ್ನುವ ನಿರೀಕ್ಷೆಯೂ ಇದೆ. ಒಟ್ಟಾರೆಯಾಗಿ ರೋಗ – ಕೀಟ ಬರುವುದಕ್ಕೂ ಮೊದಲೆ, ಅವುಗಳು ಧಾಳಿ ಮಾಡುವ ಸಂಭವವಿದೆ ಎಂದು ಅರಿತು, ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲು, ನಿಖರವಾಗಿ ನೀರಾವರಿ ಮಾಡಲು ನನಗೆ ಯುಕ್ಟಿಕ್ಸ್ ಸಹಾಯಮಾಡಿದೆ.

**– ಚೇತ್ರಾಮ್ ಗೋದಾ**
ಹರಿಯಾಣ